Website: ww.bwssb.gov.in
Email: caos@bwssb.gov.in

Fax : 080-22945102
Phone : 22945386

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

## BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560009.

No : BWSSB/CHAPM/23-2017(P-IV)/EST32/ 1557 /2021-22 Dated: 27.08.2021

**ಸುತ್ತೋಲೆ**

**ವಿಷಯು:** 2018-ನೇಮಕಾತಿಗೆ ಅನುಗುಣವಾಗಿ ಸಹಾಯಕ ಅಭಿಯಂತರ, ಕಿರಿಯ ಅಭಿಯಂತರ ಹಾಗೂ ಮಾಪನ ಓದುಗ ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗೆ ಆಯ್ಕೆಗೊಂಡಿರುವ ಅಭ್ಯರ್ಥಿಗಳು ಶೈಕ್ಷಣಿಕ ವಿದ್ಯಾರ್ಹತೆಯ ಮೂಲ ದಾಖಲೆಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 10 ಸೆನೆನಿ 2019 ದಿನಾಂಕ: 17.07.2019.
2. ದಿನಾಂಕ: 24.08.2021 & 25.08.2021ರಂದು ಅಧಿಸೂಚಿಸಲಾದ ಸಹಾಯಕ ಅಭಿಯಂತರ, ಕಿರಿಯ ಅಭಿಯಂತರ, ಪ್ರಯೋಗಾಲಯ ಸಹಾಯಕ ದರ್ಜೆ–I ಹಾಗೂ ಮಾಪನ ಓದುಗ (ಪರಿಷ್ಕೃತ) ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗಳು.

---**---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2018-ನೇಮಕಾತಿಗೆ ಅನುಗುಣವಾಗಿ ದಿನಾಂಕ: 24.08.2021 & 25.08.2021ರಂದು ಸಹಾಯಕ ಅಭಿಯಂತರ, ಕಿರಿಯ ಅಭಿಯಂತರ, ಪ್ರಯೋಗಾಲಯ ಸಹಾಯಕ ದರ್ಜೆ–I ಹಾಗೂ ಮಾಪನ ಓದುಗ (ಪರಿಷ್ಕೃತ) ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗಳನ್ನು ಅಧಿಸೂಚಿಸಲಾಗಿರುತ್ತದೆ.

ಅಂತಿಮ ಆಯ್ಕೆಪಟ್ಟಿಗೆ ಆಯ್ಕೆಗೊಂಡ ಅಭ್ಯರ್ಥಿಗಳನ್ನು ನಿಗದಿತ ಹುದ್ದೆಗೆ ನೇಮಕ ಮಾಡುವ ಮುನ್ನ ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿ/ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತೆಯನ್ನು ಅವುಗಳನ್ನು ವಿತರಿಸಿದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಗಳೊಂದಿಗೆ ಪರಿಶೀಲನೆ ನಡೆಸಿ, ಪರಿಶೀಲನೆಯ ನಂತರ ಅಂತಹ ಪ್ರಮಾಣ ಪತ್ರಗಳು ಸಂಬಂಧಿಸಿದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಗಳಿಂದಲೇ ವಿತರಿಸಲಾದ ಪ್ರಮಾಣ ಪತ್ರಗಳೆಂದು ಖಾತ್ರಿಯಾದ ನಂತರವೇ ನೇಮಕಾತಿ ಆದೇಶ ಹೊರಡಿಸತಕ್ಕದೆಂದು ಸರ್ಕಾರವು ಉಲ್ಲೇಖ (1)ರ ಆದೇಶದಲ್ಲಿ ಎಲ್ಲಾ ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಗಳಿಗೆ ನಿರ್ದೇಶನವನ್ನು ನೀಡಿರುತ್ತದೆ.

ಈ ಸಂಬಂಧ ಅಂತಿಮ ಆಯ್ಕೆಪಟ್ಟಿಗೆ ಆಯ್ಕೆಗೊಂಡ ಅಭ್ಯರ್ಥಿಗಳು ಹೊಂದಿರುವ ವಿದ್ಯಾರ್ಹತೆಯ ಅಂಕಪಟ್ಟಿ/ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತಾ ವರದಿಯನ್ನು ಪಡೆಯುವ ನಿಟ್ಟಿನಲ್ಲಿ ಮೂಲ ಅಂಕಪಟ್ಟಿ/ಪದವಿ ಪ್ರಮಾಣ ಪತ್ರಗಳ ಅವಶ್ಯಕತೆ ಇರುವುದರಿಂದ ದಿನಾಂಕ: 24.08.2021 & 25.08.2021ರಂದು ಅಧಿಸೂಚಿಸಲಾದ ಸಹಾಯಕ ಅಭಿಯಂತರ, ಕಿರಿಯ ಅಭಿಯಂತರ, ಪ್ರಯೋಗಾಲಯ ಸಹಾಯಕ ದರ್ಜೆ–I ಹಾಗೂ ಮಾಪನ ಓದುಗ (ಪರಿಷ್ಕೃತ) ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗಳಲ್ಲಿ ಆಯ್ಕೆಗೊಂಡ

ಅಭ್ಯರ್ಥಿಗಳು ಮಾತ್ರ **ದಿನಾಂಕ: 01.09.2021ರ ಸಂಜೆ 5.30ರ ಒಳಗೆ** ಬಿ.ಇ/ಪದವಿ/ಡಿಪ್ಲೋಮಾ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರ (ಸಹಾಯಕ ಅಭಿಯಂತರ, ಕಿರಿಯ ಅಭಿಯಂತರ ಮತ್ತು ಪ್ರಯೋಗಾಲಯ ಸಹಾಯಕ ದರ್ಜೆ–I ಹುದ್ದೆಯ ಅಭ್ಯರ್ಥಿಗಳು) ಹಾಗೂ ಪಿ.ಯು.ಸಿ ಅಥವಾ ತತ್ಸಮಾನ ಅಂಕಪಟ್ಟಿಗಳನ್ನು (ಮಾಪನ ಓದುಗ (ಪರಿಷ್ಕೃತ) ಹುದ್ದೆಯ ಅಭ್ಯರ್ಥಿಗಳು) **ಸಹಾಯಕ ಸಿಬ್ಬಂದಿ ವ್ಯವಸ್ಥಾಪಕರ ಶಾಖೆ, ಕೊಠಡಿ ಸಂಖ್ಯೆ– 309, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಜಲಮಂಡಳಿ, ಕೆ.ಜಿ.ರಸ್ತೆ, ಬೆಂಗಳೂರು– 560009 ಇಲ್ಲಿ** ಖುದ್ದು ಹಾಜರಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಉಳಿದಂತೆ **ಹೆಚ್ಚುವರಿ ಪಟ್ಟಿಗೆ** ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಈ **ಸುತ್ತೋಲೆ ಅನ್ವಯಿಸುವುದಿಲ್ಲ** ಹಾಗೂ **ಮೇಲೆ ತಿಳಿಸಿರುವ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಪ್ರಸ್ತುತ ಸ್ವೀಕರಿಸುವುದಿಲ್ಲ.**

**ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ**
**ಬೆಂಗಳೂರು ಜಲಮಂಡಳಿ**

27/8/21
27/8/2021

ಪ್ರತಿ: ಸಹಾಯಕ ಅಭಿಯಂತರ, ಕಿರಿಯ ಅಭಿಯಂತರ, ಪ್ರಯೋಗಾಲಯ ಸಹಾಯಕ ದರ್ಜೆ–I ಹಾಗೂ ಮಾಪನ ಓದುಗ (ಪರಿಷ್ಕೃತ) ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗಳಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಮಾಹಿತಿಗಾಗಿ ಸೂಚನಾ ಫಲಕದಲ್ಲಿರಿಸಿದೆ ಹಾಗೂ ಮಂಡಳಿಯ ಅಂತರ್ಜಾಲದಲ್ಲಿ ಅಳವಡಿಸಿದೆ.